ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 16/*09/*2025

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಸ್ ವಕೀಲರಿಂದಃ**

11. ನನ್ನ ಮದುವೆ ಕಾಲದಲ್ಲಿ ನನ್ನ ತಂದೆ ದೊಡ್ಡಯ್ಯ ಇರಲಿಲ್ಲ. ದೊಡ್ಡಯ್ಯ ಊರಫ್ ಸಣ್ಣಯ್ಯ ಎಂದು ತೋರಿಸಲು ನನ್ನ ಬಳಿ ದಾಖಲೆಗಳಿವೆ. ನನಗೆ ಮಂಜುನಾಥ ಅಣ್ಣಾಜಿ ಮತ್ತು ಶಿವಕುಮಾರ್ ಎಂಬ ಮೂರು ಮಕ್ಕಳಿದ್ದಾರೆ. ನನ್ನ ಮದುವೆ 1980 ಅಥವಾ 1981 ರಲ್ಲಿ ಬೇಸಿಗೆಯಲ್ಲಿ ಆಗಿರಬಹುದು. ನನ್ನ ಮದುವೆಯ ಎರಡು ವರ್ಷದ ನಂತರ ಮಂಜುನಾಥ, ನಂತರದ ಎರಡು ವರ್ಷಕ್ಕೆ ಅಣ್ಣಾಜಿ ಹುಟ್ಟಿರುತ್ತಾರೆ. ಇವರ ಹುಟ್ಟಿನ ದಾಖಲಾತಿಗಳಿವೆ. ನನ್ನ ಗಂಡ ಮೂಲತಃ ಹುಲ್ಲಂಗಾಲದವರು. ನನ್ನ ಗಂಡ ನಮ್ಮ ಮನೆಗೆ ಮನೆ ಅಳಿಯನಾಗಿ ಬಂದಿದ್ದಕ್ಕೆ ಯಾವುದೇ ದಾಖಲಾತಿಗಳು ಇಲ್ಲ. ನಿ ಪಿ 7 ರಲ್ಲಿ ದೊಡ್ಡಯ್ಯ ಎಂದು ನಮೂದಾಗಿದೆ. ನಿ ಪಿ7, ನಿ ಪಿ 13 ಮತ್ತು ನಿ ಪಿ 14 ರಲ್ಲಿಯೂ ದೊಡ್ಡಯ್ಯ ಬಿನ್ ಜವರಯ್ಯ ಎಂದು ನಮೂದಾಗಿದೆ. ದಾವಾ ಸ್ವತ್ತು ನನ್ನ ಗಂಡನಿಗೆ ಮಂಜೂರಾಗಿರುವ ಬಗ್ಗೆ ದಾಖಲೆಗಳನ್ನು ನಾನು ಹಾಜರಿಸಬಲ್ಲೆ. ನನ್ನ ತಂದೆ ದೊಡ್ಡಯ್ಯ ಎಂದು ತೋರಿಸಲು ದಾಖಲಾತಿಗಳು ನನ್ನ ಬಳಿ ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರಿಸಬಲ್ಲೆ. ತಿಮ್ಮಾಜ್ಜಮ್ಮ ನನ್ನ ತಾಯಿ. ಅವರು ದೊಡ್ಡಯ್ಯರವರು ಮದುವೆ ಯಾಗಿದ್ದರು. ನಿ ಪಿ 19 ರಲ್ಲಿ ನನ್ನ ತಾಯಿ ಯ ಹೆಸರು ತಿಮ್ಮಮ್ಮ ಎಂದು ನಮೂದಾಗಿದೆ. 10. ನಿ ಪಿ 20 ರಲ್ಲಿ ನನ್ನ ತಾಯಿಯ ಹೆಸರು ನಮೂದಾಗಿಲ್ಲ. ಆ ಸಮಯದಲ್ಲಿ ಪೋಟೋ ನಾನು ಕೊಟ್ಟಿರಲಿಲ್ಲ. ನಿ ಪಿ 19 ಮತ್ತು ನಿ ಪಿ 20 ರಲ್ಲಿ ಶಾಲಾ ಶಿಕ್ಷಕರೇ ನನ್ನ ಪೋಟೋ ಪಡೆದು ಅದರ ಮೇಲೆ ಸೀಲ್ ಹಾಕಿರುತ್ತಾರೆ. ಸದರಿ ದಾಖಲೆಗಳ ಮೇಲೆ ನಾನು ಸಂಬಂದವಿಲ್ಲದಿದ್ದರೂ ಸೀಲ್ ಹಾಕಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 21 ನ್ನು ಪಡೆಯಲು ನಾನೇ ಅರ್ಜಿ ನೀಡಿರುತ್ತೇನೆ. ಇದರ ಪ್ರಕಾರ ದಿನಾಂಕ 24.05.2010 ರಲ್ಲಿ ಅರ್ಜಿ ಯನ್ನು 1980 ರಲ್ಲಿ ಸತ್ತ ವ್ಯಕ್ತಿಯ ಮರಣ ಪ್ರಮಾಣ ಪತ್ರಿಕೆಗೆ ನೀಡಿರುತ್ತೇನೆ. ಅದು ನ್ಯಾಯಾಲಯಕ್ಕೆ ಹಾಜರಿಸಲು ಅವಶ್ಯಕವಾಗಿದ್ದು.

12. ನಿ ಪಿ 5 ರಲ್ಲಿ ದೊಡ್ಡಯ್ಯ ರವರು ದಿನಾಂಕ 08.03.1981 ರಂದು ತೀರಿಕೊಂಡಿದ್ದಾರೆ ಎಂದು ನಮೂದಾಗಿದೆ. ಇದು ತಪ್ಪಾಗಿ ನಮೂದಾಗಿರುತ್ತದೆ. ಗಾಳಿಪುರದ ಕಾಳಜ್ಜಯ್ಯ, ಗೌರಮ್ಮ ನನಗೆ ಗೊತ್ತಿಲ್ಲ. ನಾನು ಸದರಿಯವರಿಗೆ ಹುಟ್ಟಿದ ಮಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಹುಚ್ಚಯ್ಯನಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ಹುಚ್ಚಯ್ಯನ ಕುಟುಂಬಕ್ಕೆ ಮಾತ್ರ ಸೇರಿಬೇಕು ಎಂದರೆ ಸರಿಯಲ್ಲ.

13. ಜವರಯ್ಯ ರವರ ಕಟುಂಬದಲ್ಲಿ ದೊಡ್ಡಯ್ಯ ಊರಫ್ ಸಣ್ಣಯ್ಯ ಎಂದು ಯಾರು ಇರಲಿಲ್ಲ, ನಿ ಪಿ 21, ನಿ ಪಿ 23 ಸೃಷ್ಟಿತಾ ದಾಖಲೆಗಳು, ನಿ ಪಿ 22 ರಲ್ಲಿರುವ ತಿಮ್ಮಮ್ಮ ಬೇರೆ ಯಾವುದೋ ಕುಟುಂಬದವರು, ನನಗೂ ಮತ್ತು ಜವರಯ್ಯರವರ ಕುಟುಂಬಕ್ಕೆ ಸಂಬಂದವಿಲ್ಲ ದಾವಾ ಆಸ್ತಿಗೂ ನಮಗೂ ಸಂಬಂದವಿಲ್ಲ, ನನಗೆ ಯಾವ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತಿಳಿಯದೇ ದಾವಾ ಹೂಡಿರುತ್ತೇನೆ, ನಾನು ಜವರಯ್ಯನ ಕುಟುಂಬ ಸದಸ್ಯ ಅಲ್ಲ, ನನಗೆ ಯಾವುದೇ ಹಕ್ಕಿಲ್ಲ, ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯಃ**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**